ತದನಂತರ ಈ ದಶಕದಲ್ಲಿ ಬರಹಗಾರರು ತಮ್ಮ ಮಾಗಿದ ಅನುಭವದಿಂದ ಬರೆಯುತ್ತಿರುವುದು ಇಂದು ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಗುತ್ತಾರೆ.

5 ದಲಿತ ಸಾಹಿತ್ಯದ ಮೂಲ ಪರಿಕಲ್ಪನೆಗೂ ಈಗಿನದಕ್ಕೂ ಖಂಡಿತ ಬದಲಾವಣೆ ಇದೆ. ಪ್ರಾರಂಭದಲ್ಲಿ ಅನ್ಯಾಯಕ್ಕೆ ಎದುರಾಗಿ ಪ್ರತಿಭಟನೆ, ದೌರ್ಜನ್ಯಗಳಿಗೆದುರಾಗಿ ಆಕ್ರೋಶ ಹೆಚ್ಚು ಹೆಚ್ಚು ಇತ್ತು. ಇತ್ತೀಚೆಗೆ ಪ್ರತಿಭಟನೆಯೊಂದೇ ಸಾಹಿತ್ಯಿಕ ಮೌಲ್ಯವಾಗದೇ ದಲಿತ ಸಮುದಾಯದೊಳಗಿನ ಕುಲಪುರಾಣ ಮತ್ತು ಆಚರಣೆಗಳ ಮೂಲಕ ಮಾನವೀಯ ನೆಲೆಗಳನ್ನು ದಲಿತ ಸಂಸ್ಕೃತಿಯ ಉತ್ತಮಿಕೆಯನ್ನು ಕಾವ್ಯ, ಕಥೆ, ನಾಟಕಾದಿಯಾಗಿ ಸಾಹಿತ್ಯದಲ್ಲೂ ಕಟ್ಟಿಕೊಡಲಾಗುತ್ತಿದೆ.

6 ಮಹಿಳೆಯರ ಪ್ರಾತಿನಿಧ್ಯ ಸಾಹಿತ್ಯಿಕವಾಗಿ ಇರುವ ಏಕ ಮಾತ್ರ ಸಮಸ್ಯೆಯಲ್ಲ. ಪ್ರಧಾನವಾಗಿ ಆರ್ಥಿಕ ಮತ್ತು ರಾಜಕಾರಣಕ್ಕೂ ಸಂಬಂಧವಿದೆ. ಇದು ಶಿಷ್ಟ ಸಾಹಿತ್ಯಕ್ಕೆ ಮಾತ್ರ ಅನ್ವಯಿಸುತ್ತದೆ. ಜಾನಪದ ಲೋಕ ದಲಿತ ಮಹಿಳೆಯರಿಂದ ಆವರಿಸಲ್ಪಟ್ಟಿದೆ.

7 ದಲಿತ ಸಾಹಿತ್ಯ ಅನ್ನುವುದು ಮೊದಲಿನಿಂದಲೂ ಮಾನವೀಯತೆಯಿಂದ ಕೂಡಿದ್ದಾಗಿದೆ. 'ದಲಿತ' ಅನ್ನುವ ಪದ ಪ್ರತ್ಯೇಕವಾಗಿ ಕಂಡರೂ ದಲಿತರಿಂದ ಉತ್ಪನ್ನಗೊಂಡ ಸಾಹಿತ್ಯ ವಿಶ್ವಗುಣಗಳನ್ನು ಹೊಂದಿದೆ. ದೇವನೂರರ 'ಕುಸುಮಬಾಲೆ'ಯಲ್ಲಿ ಬರುವ ಸಂಭಾಷಣೆಯ ಒಂದು ಸಾಲನ್ನು ಉದಾಹರಿಸುವುದಾದರೆ 'ಸಂಬಜ ಅನ್ನೋದು ದೊಡ್ಡದು ಕನಾ...' ಎಂಬ ಮಾತು ಇಡೀ ದಲಿತ ಸಾಹಿತ್ಯದ ಜೀವಸತ್ವವೇ ಆಗಿದೆ.

ಇತ್ತೀಚಿನ ಎರಡು ದಶಕಗಳಲ್ಲಿ ಈ ಮುಂಚೆ ದಲಿತರು ಅನುಭವಿಸುತ್ತಿರುವ ಸಂಕಟ ಅಪಮಾನಗಳನ್ನು ಎಲ್ಲಾ ಜಾತಿಯ ಮಹಿಳೆಯರು, ಬಡವರು, ಅಲ್ಪಸಂಖ್ಯಾತರು, ಬುಡಕಟ್ಟು ಅಲೆಮಾರಿಗಳು ಅನುಭವಿಸುತ್ತಿದ್ದಾರೆ. ಹೀಗಾಗಿ ದಲಿತ ಬರಹಗಾರರು ತಮ್ಮ ವಿಮೋಚನೆಯ ಜೊತೆಗೆ ಈ ಮೇಲಿನ ಸಹಶೋಷಿತರ ವಿಮೋಚನೆಗಾಗಿಯೂ ಹೋರಾಡಬೇಕಾಗಿದೆ, ಬರೆಯಬೇಕಾಗಿದೆ. ಇನ್ನೂ ಮಾನವೀಯ ಪರವಾಗಿರುವ ಜೀವದ್ರವ್ಯಗಳನ್ನು ಹೊಂದಿರುವ ದಲಿತ ಲೋಕದ ಅನೇಕ ಅಸ್ಮಿತೆಗಳಿವೆ. ಅವನ್ನು ಜಾಗತಿಕವಾಗಿಸಬೇಕಾದ ಜರೂರು ಇದೆ. ಎರೆಹುಳು ಮಣ್ಣನ್ನು ಸತ್ವವಾಗಿಡುವಂತೆ ದಲಿತ ಸಾಹಿತ್ಯ ಸಮಾಜದ ಸ್ವಾಸ್ಥ್ಯವನ್ನು ಕಾಯುವಲ್ಲಿ ಮಹತ್ತರ ಪಾತ್ರ ವಹಿಸುತ್ತಿದೆ.


## ಅನಸೂಯ ಕಾಂಬಳೆ

ದಲಿತ ಮಹಿಳಾ ಸಂವೇದನೆಯ ಕನ್ನಡದ ಮುಖ್ಯ ಬರಹಗಾರ್ತಿ. ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಖೆಮಲಾಪುರ ಗ್ರಾಮದವರು. ಎಂ.ಎ, ಎಂ.ಫಿಲ್, ಪಿಎಚ್.ಡಿ. ಪದವೀಧರೆ. 'ಮುಳ್ಳು ಕಂಟಿಯ ನಡುವೆ', 'ಮತ್ಸ್ಯಗಂಧಿಯ ಹಾಡು' (ಕವನ ಸಂಕಲನ), ವಿಚಾರ ಸಾಹಿತ್ಯ ಮತ್ತು ಹೆಣ್ಣು (ಸಂಪಾದನೆ), ಬೆಂಕಿಯೊಳಗಣ ಬೆಳಕು (ಮಹಿಳಾ ಪ್ರಾತಿನಿಧಿಕ ಕವನ ಸಂಕಲನ ಸಂಪಾದನೆ) ಸೇರಿದಂತೆ 9 ಕೃತಿಗಳು ಪ್ರಕಟವಾಗಿವೆ. ಪ್ರಸ್ತುತ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ಹಾವೇರಿಯಲ್ಲಿ ಕನ್ನಡ ಸಹಾಯಕ ಪ್ರಾಧ್ಯಾಪಕರು.